# ದೇವರು – ಮಂದಿರ

‘ಕಾಯಕವೇ ಕೈಲಾಸ’ ಎನ್ನುವುದು ಶರಣರ ಅನುಭವದ ನುಡಿ. ಅನುಭವ ಮಂಟಪವನ್ನು ಕೇಂದ್ರವನ್ನಾಗಿಸಿಕೊಂಡು ರೂಪುಗೊಂಡ ಕಾಯಕಪ್ರಜ್ಞೆ, ಯಾವುದೇ ಕಾಲಘಟ್ಟಕ್ಕೂ ಮಾದರಿಯಾದುದು. ಕಾಯಕದಲ್ಲಿ ನಿರತನಾಗಿದ್ದಾಗ ಗುರುದರ್ಶನವಾದರೂ ಮರೆಯಬೇಕು, ಲಿಂಗದರ್ಶನವಾದರೂ ಮರೆಯಬೇಕು, ಜಂಗಮ ಮುಂದೆ ಬಂದು ನಿಂತರೂ ಹಂಗು ಹರಿಯಬೇಕು ಎನ್ನುವುದು ಶರಣ ಆಯ್ದಕ್ಕಿ ಮಾರಯ್ಯನ ಮಾತು. ಕಾಯಕವೇ ಕೈಲಾಸವಾದ ಕಾರಣ, ಆ ಕಾಯಕದಲ್ಲಿ ನಿಷ್ಠೆಯಿಂದ ತೊಡಗಿಕೊಂಡಿದ್ದಾಗ ಗುರು–ಲಿಂಗ–ಜಂಗಮರ ಬಗ್ಗೆ ಗಮನಹೋಗುವುದೂ ಸಾಧ್ಯವಿಲ್ಲವಷ್ಟೆ.

ಮಾಡುವ ಕೆಲಸದಲ್ಲಿ ದೈವವನ್ನು, ದೈವದ ನೆಲೆಯಾದ ಕೈಲಾಸವನ್ನು ಕಾಣುವ ಮನೋಭಾವ ಮನುಷ್ಯಸಹಜವಾದುದೂ ಪ್ರಕೃತಿಸಹಜವಾದುದೂ ಹಾಗೂ ಮಾನವೀಯವಾದುದೂ ಆಗಿದೆ. ನಿಸರ್ಗದಲ್ಲಿ ದೇವರನ್ನು ಕಂಡ ಪೂರ್ವಸೂರಿಗಳೆಲ್ಲ ಕಾಯಕಯೋಗಿಗಳೇ ಆಗಿದ್ದರು. ನಾಗರಿಕತೆಯ ನದಿಯಲ್ಲಿ ನೀರು ಹರಿದಂತೆಲ್ಲ, ದೇವರು ಮೂರ್ತ ರೂಪ ಪಡೆಯತೊಡಗಿದ ಹಾಗೂ ಮಂದಿರಗಳೆನ್ನುವ ಸ್ಥಾವರಗಳು ರೂಪುಗೊಳ್ಳತೊಡಗಿದವು. ನಿಸರ್ಗದ ಒಡಲಿನಿಂದ ನಾಗರಿಕತೆಯ ಬಯಲಿಗೆ ದೇವರು ಬಂದಂತೆಲ್ಲ ಕಾಯಕದಲ್ಲಿ ದೇವರನ್ನು ಕಾಣುವ ಪ್ರಜ್ಞೆ ಹಿಂದಾಗಿ, ಪೂಜೆಯೇ ಒಂದು ಕಾಯಕ ಎನ್ನುವ ನಂಬಿಕೆ ಗಾಢವಾಗತೊಡಗಿತು. ಕಾಯಕಗಳಿಗಿಂತಲೂ ಪೂಜೆಯೇ ಶ್ರೇಷ್ಠ ಎನ್ನುವ ಮನೋಭಾವ ಸಾಮಾಜಿಕ ತರತಮಗಳಿಗೆ ಆಸ್ಪದ ಕಲ್ಪಿಸಿತು. ಈ ವೈರುಧ್ಯವನ್ನು ಮನಗಂಡೇ ಶರಣರು ಕಾಯಕವನ್ನು ಕೈಲಾಸವೆಂದರು. ಬಸವಣ್ಣನಂತೂ ದೇಹವನ್ನೇ ದೇಗುಲ ಎಂದು ಭಾವಿಸಿದ.

ಕಾಯಕದಲ್ಲಿ ದೇವರನ್ನು ಕಾಣುವ ಸಂಗತಿ ದೈವದ ಕಲ್ಪನೆಗೆ ವಿರುದ್ಧವಾದುದಲ್ಲ. ಬದುಕಿನ ಆದ್ಯತೆ ಯಾವುದಾಗಿರಬೇಕೆನ್ನುವುದನ್ನು ಕಾಯಕನಿಷ್ಠೆ ಸೂಚಿಸುತ್ತದೆ. ಕಾಯಕ ಪ್ರಾಮಾಣಿಕವಾಗಿದ್ದಾಗ ಅದು ಪೂಜೆಯೂ ಕೈಲಾಸವೂ ಆಗಬಲ್ಲದು. ನಡೆ ಅಳ್ಳಕವಾದಾಗ ಪೂಜೆ ಪ್ರದರ್ಶನವಾಗುವುದು.

ಕಾಯಕವೇ ಕೈಲಾಸ ಎನ್ನುವ ಶರಣರ ಮಾತಿಗೆ ರವೀಂದ್ರನಾಥ ಟ್ಯಾಗೋರರ ‘Work is Worship’ ಕವಿತೆ ಅಡಿಗೆರೆ ಎಳೆಯುವಂತಿದೆ. ಯಾವುದು ನೈಜವಾದ ಪೂಜೆ ಎನ್ನುವುದನ್ನು ರವೀಂದ್ರರು ಬಹು ಸೊಗಸಾಗಿ ವಿಶ್ಲೇಷಿಸಿದ್ದಾರೆ. ದೇವರು ಹಾಗೂ ಪೂಜೆಯ ಕುರಿತಾದ ರೂಢಿಗತ ನಂಬಿಕೆಗಳ ಮರುವಿಶ್ಲೇಷಣೆಗೆ ಕವಿತೆ ಒತ್ತಾಯಿಸುತ್ತದೆ. ಮಂದಿರಗಳಂಥ ಸ್ಥಾವರಗಳ ಚೌಕಟ್ಟುಗಳಲ್ಲಿ ದೇವರನ್ನು ಕಾಣುವ ಹಾಗೂ ಪ್ರದರ್ಶನ ರೂಪದ ಆಚರಣೆಗಳ ಮೂಲಕ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನಗಳ ನಿರರ್ಥಕತೆಯನ್ನು ಕವಿತೆ ಮನದಟ್ಟು ಮಾಡುವಂತಿದೆ.

ಮಂದಿರದ ಕಗ್ಗತ್ತಲೆಯ ಮೂಲೆಯಲ್ಲಿ ದೇವರು ಇರುವನೇ ಎಂದು ಪ್ರಶ್ನಿಸುತ್ತ, ಜಪ ಹಾಗೂ ಪ್ರಾರ್ಥನೆಗಳಿಂದ ಹೊರಬರುವಂತೆ ಕವಿತೆ ಬೆರಳು ಚಾಚುತ್ತದೆ. ಕಣ್ಣುಗಳನ್ನು ತೆರೆದುನೋಡಿದರೆ, ಮಂದಿರದಲ್ಲಿ ದೇವರು ನಮ್ಮ ಮುಂದಿಲ್ಲ. ಅವನು ಹೊಲವನ್ನು ಉಳುವವನ ಉಳುಮೆಯಲ್ಲಿದ್ದಾನೆ. ರಸ್ತೆಯನ್ನು ನಿರ್ಮಿಸುತ್ತಿರುವ ಕಾರ್ಮಿಕ ಒಡೆಯುತ್ತಿರುವ ಕಲ್ಲಿನ ಚೂರುಗಳಲ್ಲಿದ್ದಾನೆ. ಸೂರ್ಯನಡಿ ದೂಳಿನಿಂದ ಆವೃತವಾದ ವ್ಯಕ್ತಿಯೊಂದಿಗೆ ದೇವರಿದ್ದಾನೆ – ಹೀಗೆ, ದೇವರ ಇರುವಿಕೆಯ ಸ್ಥಳಗಳನ್ನು ಕವಿ ಪಟ್ಟಿ ಮಾಡುತ್ತಾರೆ. ಉಳುಮೆ, ಬೆವರು, ದೂಳು – ಇವೆಲ್ಲವೂ ಶ್ರಮದ ಕುರುಹುಗಳು. ಶ್ರಮವಿದ್ದಲ್ಲಿ ದೇವರು!

ಮಳೆಯ ರೂಪದಲ್ಲಿ, ಬಿಸಿಲಿನ ರೂಪದಲ್ಲಿ, ಅಷ್ಟು ಮಾತ್ರವೇಕೆ – ದೂಳಿನ ಕಣಗಳಲ್ಲೂ ದೇವರ ಇರುವನ್ನು ಗುರ್ತಿಸುವುದು, ಪ್ರಕೃತಿಯಲ್ಲಿ ದೈವವನ್ನು ಕಾಣುವ ಬಗೆ. ಹಲವು ಬಗೆಯ ಜಿಡ್ಡುಗಳಿಂದ ಆವೃತವಾದ ಬಹಿರಂಗದ ಕಣ್ಣುಗಳಿಗೆ ದೇವರ ಸಾಕ್ಷಾತ್ಕಾರವೆಲ್ಲಿ ಸಾಧ್ಯ? ಅಂತರಂಗದ ಕಣ್ಣುಗಳನ್ನು ತೆರೆದಾಗಷ್ಟೇ ದೇವರ ಇರುವು ಅನುಭವಕ್ಕೆ ಗೋಚರಿಸಬಲ್ಲದು. ಕಣ್ಣು ಮುಚ್ಚಿ ಪ್ರಾರ್ಥಿಸುವ ಬದಲು, ಕಾಯಕಕ್ಕೆ ಹೆಚ್ಚಿನ ಒತ್ತು ನೀಡಿದಾಗ ದೇವರ ಇರುವು ಹೊಳೆಯಬಲ್ಲದು. ಪೂಜೆ–ಪ್ರಾರ್ಥನೆಯ ಹೆಸರಿನಲ್ಲಿ ಮಂದಿರಗಳಲ್ಲಿ ಸಮಯ ವ್ಯರ್ಥ ಮಾಡುವುದರಿಂದ ದೇವರನ್ನು ಒಲಿಸಿಕೊಳ್ಳಲಾಗುವುದಿಲ್ಲ. ಕಾಯಕದಿಂದಷ್ಟೇ ಸಾಕ್ಷಾತ್ಕಾರ.

ದೇವರು ನಮ್ಮ ದೇಹದಲ್ಲಿಯೇ ಇರುವುದನ್ನು ಮನಗಾಣಿಸುವುದು ರವೀಂದ್ರರ ಉದ್ದೇಶ. ‘ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ’ ಎನ್ನುವ ಜಿ.ಎಸ್. ಶಿವರುದ್ರಪ್ಪನವರ ‘ಅನ್ವೇಷಣೆ’ ಕವಿತೆಯೂ ಮನುಷ್ಯನ ಅಂತರಂಗದ ಜಾಗೃತಿಯ ಕುರಿತು ಮಾತನಾಡುತ್ತದೆ. ಸ್ಥಾವರಗಳಲ್ಲಿನ ಹುಡುಕಾಟ ನಿಲ್ಲಿಸಿ, ನಮ್ಮೊಳಗಿನ ಪ್ರೀತಿ ಸ್ನೇಹಗಳನ್ನು ಗುರ್ತಿಸುವ ಅಗತ್ಯವನ್ನು ಜಿಎಸ್ಎಸ್ ಪ್ರತಿಪಾದಿಸುತ್ತಾರೆ. ಊರ ಜಾತ್ರೆಯ ಸಂಭ್ರಮವನ್ನು ನಿರ್ಲಕ್ಷಿಸಿ, ಊರನ್ನು ಸ್ವಚ್ಛಗೊಳಿಸುವ ಹೊಣೆಗಾರಿಕೆಯಲ್ಲಿ ಕುವೆಂಪು ಅವರ ‘ಜಲಗಾರ’ ತನ್ನ ದೈವವನ್ನು ಕಾಣುತ್ತಾನೆ. ಆ ಜಲಗಾರನ ಬಳಿಗೆ ಜಗದ ಜಲಗಾರ ಇಳಿದುಬರುತ್ತಾನೆ.

ಶರಣರಿರಲಿ, ರವೀಂದ್ರರಿರಲಿ, ಜಿಎಸ್ಎಸ್ ಇಲ್ಲವೇ ಕುವೆಂಪು ಆಗಲಿ, ಯಾರೂ ದೇವರ ಇರುವನ್ನು ನಿರಾಕರಿಸುತ್ತಿಲ್ಲ. ದೇವರನ್ನು ಕಾಣಲು ನಾವು ಅನುಸರಿಸುತ್ತಿರುವ ಮಾರ್ಗಗಳನ್ನಷ್ಟೇ ಅವರು ಪ್ರಶ್ನಿಸುತ್ತಿದ್ದಾರೆ. ದೇವರು ಚಲನಶೀಲ, ಎಲ್ಲೆಡೆ ಇರುವಂತಹವನು; ಅವನನ್ನು ಮಂದಿರದ ಚೌಕಟ್ಟಿನಲ್ಲಿ ಉಳಿಸುವ ವೈರುಧ್ಯದ ಬಗ್ಗೆ ಯೋಚಿಸುವಂತೆ ಒತ್ತಾಯಿಸುತ್ತಿದ್ದಾರೆ. ದೈವದ ಸ್ಥಾವರೀಕರಣದೊಂದಿಗೆ ಮನುಷ್ಯಸಹಜ ನಡವಳಿಕೆಗಳು ಜಡವಾಗುವ ಅಪಾಯವನ್ನು ನಮಗೆ ಮನಗಾಣಿಸುತ್ತಿದ್ದಾರೆ.

ಇಂದಿನ ಪರಿಸ್ಥಿತಿ ನೋಡಿ. ‘ದೇಹವೇ ದೇಗುಲ’ ಎನ್ನುವುದರಲ್ಲಿ ನಮಗೆ ನಂಬಿಕೆ ಹೋಗಿದೆ. ‘ದೇವಗೆದೆಯ ಗುಡಿಲೆ ಸಾಕು ನಲಿದು ನೆಲೆಸಲು’ (ಪುತಿನ) ಎನ್ನುವ ಸತ್ಯವನ್ನು ನಿರ್ಲಕ್ಷಿಸಿದ್ದೇವೆ. ಅದರ ಫಲವಾಗಿಯೇ, ಮಂದಿರವೆನ್ನುವುದು ಅಂತರಂಗದ ಬೆಳಕಾಗುವ ಬದಲು, ಬಹಿರಂಗದ ಸ್ಥಾವರವಾಗಿದೆ. ಭಕ್ತಿ ಮತ್ತು ಪೂಜೆ ಪ್ರದರ್ಶನದ ಸ್ವರೂಪ ಪಡೆದುಕೊಂಡಿವೆ. ಮಂದಿರ ಕಟ್ಟಲು ಮೇಲಾಟ ನಡೆಯುತ್ತದೆ. ದೇವರು ಮಂದಿರದಲ್ಲಿಲ್ಲ ಎಂದು ಯಾರಾದರೂ ಹೇಳಿದರೆ ಅವರನ್ನು ಗುಮಾನಿಯಿಂದ ನೋಡಲಾಗುತ್ತದೆ; ಧರ್ಮವಿರೋಧಿಯೆಂದು ಭಾವಿಸಲಾಗುತ್ತದೆ. ಈ ನಡವಳಿಕೆಗಳಿಂದ ನಾವು ಸಣ್ಣವರಾಗುವ ಜೊತೆಗೆ ನಮ್ಮ ದೇವರನ್ನೂ ಸಣ್ಣವನನ್ನಾಗಿಸುತ್ತಿದ್ದೇವೆ. ನಾವು ದೊಡ್ಡವರಾಗದೆ ನಮ್ಮ ದೇವರು ದೊಡ್ಡವನಾಗುವುದಿಲ್ಲ ಎನ್ನುವ ಶಿವರಾಮ ಕಾರಂತರ ಮಾತನ್ನು, ನಮ್ಮ ಸಣ್ಣತನವನ್ನು ದೇವರಿಗೆ ಆರೋಪಿಸುವ ಮೂಲಕ ನಿಜವಾಗಿಸುತ್ತಿದ್ದೇವೆ. ದೇವರ ಹೆಸರಿನಲ್ಲಿ ಮಾನವೀಯತೆಯನ್ನು ಮರೆಯುವುದಾದರೆ, ನಾವು ಹುಡುಕುತ್ತಿರುವುದು ಏನನ್ನು ಎನ್ನುವ ಪ್ರಶ್ನೆ ಕೇಳಿಕೊಳ್ಳಬೇಕಾಗುತ್ತದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಅದೃಷ್ಟ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.
  –ಸ್ವಾಮಿ ವಿವೇಕಾನಂದ
- ಸಮನ್ವಯತೆ, ಸಮತೋಲನ, ಉಪಯುಕ್ತತೆ, ಪರಿಪೂರ್ಣತೆ, ಆನಂದದಾಯಕ ಹಾಗೂ ನೈಸರ್ಗಿಕತೆಯೇ ಶಿಕ್ಷಣದ ಗುಣಗಳು.
  –ರೂಸೊ
- ವಿದ್ಯಾಭ್ಯಾಸ ಎನ್ನುವುದು ಯಾವ ದಿಕ್ಕಿನಲ್ಲಿ ಮನುಷ್ಯನನ್ನು ನಡೆಸುವುದೋ ಅದೇ ಅವನ ಭವಿಷ್ಯವನ್ನು ಮುನ್ನಡೆಸುತ್ತದೆ.
  –ಪ್ಲೇಟೊ
- ಜಗಳ ಮಾಡಲು ಬಂದವನ ಎದುರು ಮೌನವಾಗು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.
  –ಎ.ಆರ್. ಕೃಷ್ಣಶಾಸ್ತ್ರಿ